O.S.36/2017

DW : 3

ದಿನಾಂಕ 27-06-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃಶ್ರಿ ಎಸ್ ವಿ ಟಿ ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತೇನೆ. ನನಗೆ ●ಯಾವುದೇ ಜಮೀನು ಇಲ್ಲ. ವಾದಿಗಳ ಪರಿಚಯ, ವಿವರಗಳು ಗೊತ್ತಿಲ್ಲ. 1ನೇ ಪ್ರತಿವಾದಿ ಗೊತ್ತು. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ದಾವೆಯ ಪರಿಹಾರದ ಬಗ್ಗೆ ಗೊತ್ತಿಲ್ಲ. 1 ಎಕರೆ 8 ಗುಂಟೆ ಜಮೀನು ಅವರಿಗೆ ಸೇರಿದ್ದು ಎಂದು ವಾದಿಗಳು ದಾವೆ ಸಲ್ಲಿಸಿದ್ದಾರೆ, ಅದರ ಸರ್ವೆ ನಂಬರ ಗೊತ್ತಿಲ್ಲ. ತುಮ್ಮಿನಕಟ್ಟಿ ಗ್ರಾಮದಲ್ಲಿ ವಾದಿಗಳಿಗೆ ಸೇರಿದ ●ಯಾವುದೇ ಜಮೀನುಗಳು ಇಲ್ಲ. ಸರ್ವೆ ನಂ.2/1 ರಲ್ಲಿರುವ ಸುಮಾರು 9 ಎಕರೆ ಜಮೀನು ಪ್ರತಿವಾದಿಗೆ ಸೇರಿದೆ. ಸದರಿ ಜಮೀನಿನಲ್ಲಿ 3 ಹಿಸ್ಸೆ ಇದ್ದು , 1ನೇ ಪ್ರತಿವಾದಿ, ಸುರೇಶ, ಶೇತಸನದಿ ಇವರಿಗೆ ಸೇರಿರುತ್ತದೆ. 1ನೇ ಪ್ರತಿವಾದಿ 3 ಎಕರೆ 14 ಗುಂಟೆ, ಸುರೇಶ ಪಾಟೀಲ, ಉಳಿದ 3 ಎಕರೆ ಶೆತಸನದಿಯವರು ವ್ಯವಸಾಯ ಮಾಡುತ್ತಿದ್ದಾರೆ, ಸದರಿ ಜಮೀನಿನ ಪಕ್ಕ ನನಗೆ ಸೇರಿದ ●ಯಾವುದೇ ಜಮೀನು ಇಲ್ಲ. ಸರ್ವೆನಂ.2/1 ರಲ್ಲಿ 3 ಎಕರೆ 4 ಗುಂಟೆ, 2 ಎಕರೆ 12 ಗುಂಟೆ, 3 ಎಕರೆ 14 ಗುಂಟೆಯಂತೆ 3 ಹಿಸ್ಸೆಗಳಿವೆ ಎಂದರೆ ಸರಿ. ದಾವಾಸ್ತಿಯನ್ನು ವಾದಿಗಳು ಸಾಗೂ ಮಾಡುತ್ತಾರೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಸಾಕ್ಷಿ ನುಡಿಯುವಂತೆ ತಿಳಿಸಿದ್ದರು. 3ನೇ ಪ್ರತಿವಾದಿ ನನ್ನನ್ನು ಈ ದಿನ ಕರೆತಂದಿದ್ದಾರೆ, ಅವರು ಹೇಳಿದಂತೆ ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಗೋಣೆಪ್ಪ ವಂಶಸ್ಥರು ಸುಮಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ, ಅದಕ್ಕೆ ದಾಖಲೆಗಳಿವೆ ಎಂದರೆ ಸರಿಯಲ್ಲ. ವಾದಿಗಳು ದಾವಾಸ್ತಿಯ ಸ್ವಾಧೀನದಲ್ಲಿರುವ ವಿಚಾರ ಗೊತ್ತಿದ್ದರೂ 3ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನೇಕಾರಿಕೆ ಮಾಡುತ್ತೀರಿ, ವ್ಯವಸಾಯ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರದಿಂದ ●ಯಾವುದೇ ದಾಖಲೆಯನ್ನು ವ್ಯವಸಾಯ ಮಾಡುತ್ತಿದ್ದೇನೆ ಎಂದು ತೋರಿಸಲು ಪಡೆದಿಲ್ಲ. ಪ್ರತಿವಾದಿಗಳು ದಾವಾಸ್ತಿ ಸ್ವಾಧೀನದಾರರಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ●ಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

Sd/-

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.